ಸೂಟ್‌ಕೇಸನ್ನು ತೆರೆದು ಆ ಪುಸ್ತಕವನ್ನು ಟೇಬಲ್ಲಿನ ಮೇಲಿಟ್ಟ. ಅದೊಂದು ಬಟ್ಟೆಯ ರಟ್ಟಿದ್ದ ಆಕ್ಟೆವೊ ಸಂಪುಟ. ಎಷ್ಟೋ ಕೈಯಿಗಳನ್ನು ಹಾದುಬಂದಿತ್ತೆಂಬುದರಲ್ಲಿ ಯಾವುದೇ ಸಂಶಯವಿರಲಿಲ್ಲ. ಅದನ್ನು ಪರಿಶೀಲಿಸುತ್ತಿರುವಾಗಲೇ ಅದರ ಅಸಾಮಾನ್ಯ ತೂಕವನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅದರ ಬೆನ್ನಿನ ಮೇಲೆ 'ಪವಿತ್ರ ರಾಯಸ' ಎಂಬ ಪದಗಳಿದ್ದವು; ಅವುಗಳ ಕೆಳಗೆ, 'ಬಾಂಬೆ' ಎಂದಿತ್ತು.

"ಬಹುಶಃ ಹತ್ತೊಂಬತ್ತನೇ ಶತಮಾನದ್ದಿರಬೇಕು" ಎಂದೆ.

"ನನಗೆ ಗೊತ್ತಿಲ್ಲ. ಯಾವ ಕಾಲದ್ದೂ ಅಂತ ನನಗೆ ಗೊತ್ತಾಗಲಿಲ್ಲ" ಎಂದ.

ನಾನು ಆ ಪುಸ್ತಕವನ್ನು ಮನಬಂದಂತೆ ತಿರುವಿದೆ. ನನಗೆ ಪರಿಚಿತವಲ್ಲದ ಲಿಪಿ. ತುಸು ಜರ್ಜರಗೊಂಡಿದ್ದ, ಅಂಥ ಒಳ್ಳೆಯ ಮುದ್ರಣವಿಲ್ಲದ ಅದರ ಪುಟಗಳು, ಬೈಬಲ್ಲಿನಲ್ಲಿರುವಂತೆ, ಎರಡು ಕಾಲಂಗಳಲ್ಲಿದ್ದವು. ಬಹಳ ಹತ್ತಿರ ಹತ್ತಿರವಾಗಿ ಮುದ್ರಣಗೊಂಡಿದ್ದ ಪಠ್ಯ ಪಾದ್ರಿಯ ಧ್ಯಾನಸ್ತೋತ್ರದ ಕ್ರಮದಲ್ಲಿತ್ತು. ಪುಟಗಳ ಮೇಲ್ತುದಿಯ ಮೂಲೆಗಳಲ್ಲಿ ಅರಾಬಿಕ್ ಸಂಖ್ಯೆಗಳಿದ್ದವು. ಒಂದು ಎಡಗಡೆಯ ಪುಟದಲ್ಲಿ 40,514 ಎಂಬ ಸಂಖ್ಯೆಯಿದ್ದರೆ ಬಲಗಡೆಯ ಪುಟದಲ್ಲಿ 999 ಎಂಬ ಸಂಖ್ಯೆಯಿದೆಯೆಂದು ನನಗೆ ಗೊತ್ತಾಯಿತು. ಆ ಹಾಳೆ ತಿರುಗಿಸಿದೆ; ಅದರಲ್ಲಿ ಎಂಟು ಅಂಕಿಗಳ ಸಂಖ್ಯೆಯಿತ್ತು. ಜೊತೆಗೆ ನಿಘಂಟುಗಳಲ್ಲಿ ಇರುವಂತಹ ಒಂದು ಸಣ್ಣ ಚಿತ್ರ – ಶಾಲೆಯ ಹುಡುಗನ ಪಳಗದ ಕೈಯಿ ಬರೆದಿರುವುದೇನೋ ಎನ್ನುವಂಥ – ಒಂದು ಲಂಗರಿನ ಚಿತ್ರ.

ಆ ಹಂತದಲ್ಲೇ ಆ ಅಪರಿಚಿತ ಹೇಳಿದ್ದು: "ಚಿತ್ರವನ್ನು ಸೂಕ್ಷ್ಮವಾಗಿ ನೋಡಿ. ಅದನ್ನು ಇನ್ನೆಂದೂ ಮತ್ತೆ ನೋಡಲಾರಿರಿ."

ಆ ಪುಟವನ್ನು ಗುರುತಿಟ್ಟುಕೊಂಡು ಪುಸ್ತಕವನ್ನು ಮುಚ್ಚಿದೆ. ತಕ್ಷಣವೇ ತೆರೆದೆ. ಲಂಗರಿನ ಚಿತ್ರಕ್ಕಾಗಿ ಪುಟ ಪುಟದಲ್ಲೂ ನಿಷ್ಫಲವಾಗಿ ಹುಡುಕಾಡಿದೆ. ನನ್ನ ದಿಗ್ಭ್ರಮೆಯನ್ನು ಮುಚ್ಚಿಕೊಳ್ಳುವುದಕ್ಕಾಗಿ, "ಇಂಡಿಯಾದ ಯಾವುದೋ ಭಾಷೆಯ ಸನಾತನ ಗ್ರಂಥದ ಒಂದು ಪ್ರತಿ ಇರಬೇಕು, ಅಲ್ಲವೆ?" ಎಂದು ಕೇಳಿದೆ.

"ಅಲ್ಲ" ಎಂದ ಅವನು. ಆಮೇಲೆ ಯಾವುದೋ ಗುಟ್ಟನ್ನು ಹೇಳುವವನ ಹಾಗೆ ತನ್ನ ದನಿಯನ್ನು ಕುಗ್ಗಿಸಿದ. "ಬಯಲುಸೀಮೆಯ ಒಂದು ಊರಿನಲ್ಲಿ ನನಗೆ ಈ ಪುಸ್ತಕ ಸಿಕ್ಕಿತು, ಒಂದು ಬೈಬಲ್ಲು, ಒಂದಷ್ಟು ರೂಪಾಯಿಗಳಿಗೆ ಬದಲಾಗಿ. ಇದನ್ನು ಇಟ್ಟುಕೊಂಡಿದ್ದವನಿಗೆ ಹೇಗೆ ಓದುವುದೆಂದು ಗೊತ್ತಿರಲಿಲ್ಲ. ಬಹುಶಃ ಅವನು ಈ ಪುಸ್ತಕಗಳ ಪುಸ್ತಕವನ್ನು ಒಂದು ತಾಯಿತ ಎಂದುಕೊಂಡಿರಬೇಕು. ಅವನು ಕೆಳ ಜಾತಿಯವನು; ಅಸ್ಪೃಶ್ಯರು ಮಾತ್ರ ಯಾವುದೇ ಸೋಂಕಿನ ಭಯವಿಲ್ಲದೆ ಅವನ ನೆರಳನ್ನು ತುಳಿಯಬಹುದಿತ್ತು. ಅವನು ತನ್ನ ಪುಸ್ತಕದ ಹೆಸರು ಮರಳಿನ ಹೊತ್ತಿಗೆ ಎಂದು ಹೇಳಿದ. ಯಾಕೆಂದರೆ, ಪುಸ್ತಕಕ್ಕಾಗಲೀ ಮರಳಿಗಾಗಲೀ ಆದಿ ಅಂತ್ಯಗಳಿಲ್ಲವಲ್ಲ."

ಅವನು ಮೊದಲ ಪುಟವನ್ನು ಹುಡುಕಿ ಎಂದ.

ನಾನು ಪುಸ್ತಕವನ್ನು ಎಡಗೈಯಲ್ಲಿ ಹಿಡಿದುಕೊಂಡು ತೆರೆದೆ – ಹೆಬ್ಬೆರಳು ತೋರುಬೆರಳು ಒಂದನ್ನೊಂದು ಮುಟ್ಟುವ ಹಾಗೆ. ಏನೂ ಪ್ರಯೋಜನವಾಗಲಿಲ್ಲ. ಪ್ರತಿಯೊಂದು ಸಲ ತೆರೆದಾಗಲೂ ಹೊದಿಕೆಯ ಮತ್ತು ನನ್ನ ಹೆಬ್ಬೆರಳಿನ ನಡುವೆ ಅನೇಕ ಪುಟಗಳು ಇರುತ್ತಿದ್ದವು. ಪುಸ್ತಕದಿಂದಲೇ ಆ ಪುಟಗಳು ಬೆಳೆದು ಬರುತ್ತಿರುವ ಹಾಗೆ.

"ಈಗ ಕೊನೆಯ ಪುಟವನ್ನು ಹುಡುಕಿ."

ನಾನು ಮತ್ತೆ ಸೋತೆ. ನನ್ನದಲ್ಲದ ದನಿಯಲ್ಲಿ "ಇದು ಸಾಧ್ಯವಿಲ್ಲ" ಎಂದಷ್ಟೇ ತೊದಲುವಂತಾಯಿತು. ಪುಸ್ತಕದಲ್ಲಿದ್ದ ಪುಟಗಳ ಸಂಖ್ಯೆ ಅಪಾರ ಎನ್ನುವಷ್ಟು ಹೆಚ್ಚೂ ಅಲ್ಲ,